

# ಕುರುಡು ನಂಬಿಕೆ

■ ಉದಯ್ ಜಾದೂಗಾರ್
ಕಲೆ: ಈಶ್ವರ ಬಡಿಗೇರ

ಆತ ಮಾನಸಿಕವಾಗಿ ತೀರಾ ಹೈರಾಣಾಗಿದ್ದ. ಹೆಂಡತಿ ಮತ್ತು ಆಕೆಯ ಸ್ನೇಹಿತ ತನ್ನ ಕುರುಡುತನದ ಲಾಭ ತೆಗೆದುಕೊಳ್ಳುವ ಬಗ್ಗೆ ಅದೆಷ್ಟೋ ಬಾರಿ ಅನಿಸಿದ್ದಿದೆ. ಕೆಲವೊಮ್ಮೆ ಆಕೆ ಮತ್ತು ಆತನಿದ್ದಾಗ ಕವಿದ ಗಾಢ ಮೌನ ಅದೆಷ್ಟೋ ಕಥೆಗಳನ್ನು ಹೇಳುತಿತ್ತು. ‘ಏನು, ಯಾರೂ ಇಲ್ವ’ ಎಂದಾಗ ಆಕೆ ಆತನ ತೋಳಿನಿಂದ ಬಿಡಿಸಿಕೊಂಡು ಬಂದು – ‘ಇಲ್ಲೇ ಇದ್ದೀನಲ್ಲಾ ಹೇಳಿ’ ಅನ್ನುವಂತೆ ಭಾಸವಾಗುತಿತ್ತು. ಅದು ತನ್ನ ಭ್ರಮೆ ಇರಬಹುದೇನೋ ಅಂದುಕೊಳ್ಳೋಣ ಅಂದ್ರೂ ಪ್ರತಿ ದಿನ ತನ್ನನ್ನು ಬಿಡದೆ ಕಾಡುವ ಆ ಸಂಕಟದಿಂದ ಹೊರ ಬರಲು ಯೋಚಿಸಿ ಯೋಚಿಸಿ ಕಡೆಗೆ ಒಂದು ದಾರಿ ಕಾಣಿಸಿತವನಿಗೆ.

‘ಒಂದು ರೌಂಡ್ ಹೋಗೋಣವೆ?’ ಎಂದಾಗ, ‘ಈಗ? ಈ ರಾತ್ರಿಯಲ್ಲಿ?’ ಎಂದ ಇಬ್ಬರ ಧ್ವನಿಗೆ ನಗುತ್ತ – ‘ಮಿನಿ, ನೀನು ಊಟ ರೆಡಿ ಮಾಡು. 20 ನಿಮಿಷದಲ್ಲಿ ಬಂದುಬಿಡ್ತೇವೆ’ ಎಂದು ಹೊರಟ.

ದಿನವೂ ಮಿನಿಯೊಂದಿಗೆ ಹೆಜ್ಜೆಯನ್ನು ಲೆಕ್ಕಹಾಕುತ್ತ ನಡೆಯುವವನಿಗೆ, 50 ಹೆಜ್ಜೆಯ ನಂತರ ಸಿಗುವ ಬಾವಿಯ ಪರಿಚಯವಾಗಿತ್ತು. ಸ್ನೇಹಿತನೊಂದಿಗೆ ಹೊರಟ ಗಂಡನ ವರ್ತನೆ ಯಾಕೋ ಸಹಜವೆನಿಸಲಿಲ್ಲ. ಸದ್ದು ಮಾಡದೆ ಹಿಂಬಾಲಿಸಿದಳಾಕೆ.

ಬಾವಿಯ ಹತ್ತಿರ ಬರುತ್ತಿದ್ದಂತೆ ಒಮ್ಮೆಲೇ ಸ್ನೇಹಿತನ ಮುಖದ ಮೇಲೆ ಉಗುರಿನಿಂದ ಬಲವಾಗಿ ಪರಚಿ ಬಾವಿಗೆ ಹಾರಿದ. ಬೆಳಿಗ್ಗೆ ಸ್ಥಳೀಯ ಪೊಲೀಸರಿಗೆ ತಲುಪಿದ ಆತನ ಪತ್ರದಲ್ಲಿ, ‘ಒಂದು ವೇಳೆ ತನಗೇನಾದರೂ ಅಪಾಯ ಸಂಭವಿಸಿದಲ್ಲಿ ಇವರಿಬ್ಬರೇ ಕಾರಣ’ ಎಂದು ಬರೆದಿದ್ದ.

ಪ್ರತಿನಿತ್ಯದ ಸಾವಿಗಿಂತ ಒಮ್ಮೆ ಸಾಯೋದಕ್ಕೆ ಸಿದ್ಧನಾಗಿದ್ದ. ಆದರೆ ತನ್ನ ಸಾವಿನೊಂದಿಗೆ ಅವರಿಬ್ಬರನ್ನೂ ಕರೆದುಕೊಂಡು ಹೋಗಲು ಅವರ ಕತ್ತಿಗೆ ನೇಣು ಬೀಳುವ ಮಾಸ್ಟರ್ ಪ್ಲಾನ್ ಮಾಡಿದ್ದ. ■